# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 1349/2022

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು :

1. ನಾಗೇಂದ್ರ ತಂದೆ ಲಕ್ಷ್ಮಣ ಶಿಮನಗೌಡ,
   ವಯಸ್ಸು : 49 ವರ್ಷ, ವೃತ್ತಿ : ರೈತಾಪಿ ಕೆಲಸ,
2. ಕೇದಾರಿ ತಂದೆ ಫಕೀರ ಜನಗೇಕರ,
   ವಯಸ್ಸು : 52 ವರ್ಷ, ವೃತ್ತಿ : ರೈತಾಪಿ,
3. ಮಂಜುನಾಥ ತಂದೆ ಕೇದಾರಿ ಜನಗೇಕರ,
   ವಯಸ್ಸು : 26 ವರ್ಷ, ವೃತ್ತಿ : ಕೂಲಿ ಕೆಲಸ,
4. ಬಸವಂತ ತಂದೆ ರಾಮ ಪವಾರ,
   ವಯಸ್ಸು : 55 ವರ್ಷ, ವೃತ್ತಿ : ರೈತಾಪಿ,
5. ಕಿರಣ ತಂದೆ ನಾಮದೇವ ಪವಾರ,
   ವಯಸ್ಸು : 23 ವರ್ಷ, ವೃತ್ತಿ : ರೈತಾಪಿ ಕೆಲಸ,
6. ಪಿಶಣ್ಣ ತಂದೆ ನಿಂಗಪ್ಪ ದೊಡ್ಡಗೌಡ,
   ವಯಸ್ಸು : 26 ವರ್ಷ, ವೃತ್ತಿ : ರೈತಾಪಿ ಕೆಲಸ,
7. ಪಿಶಣ್ಣ ತಂದೆ ಯಲ್ಲಾರಿ ಹುಚ್ಚಾಟಿ,
   ವಯಸ್ಸು : 26 ವರ್ಷ, ವೃತ್ತಿ : ರೈತಾಪಿ ಕೆಲಸ,
   ಎಲ್ಲರೂ ಸಾಃ ಕಾವಲವಾಡ,
   ತಾ : ಹಳಿಯಾಳ, ಜಿಲ್ಲೆ : ಉತ್ತರ ಕನ್ನಡ.

## ದೋಷಾರೋಪಣೆ

ನಾನು ದೇಶಭೂಷಣ ಕೌಜಲಗಿ, ಬಿ.ಎ.ಎಲ್.ಎಲ್.ಬಿ., ಪ್ರ.ದ.ನ್ಯಾದಂ. ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೊಷಾರೋಪಣೆ ಏನೆಂದರೆ,

ಪಿರ್ಯಾದಿ ಹಾಗೂ ಆರೋಪಿತರಾದ ನಿಮ್ಮ ನಡುವೆ ಮನೆಯ ಜಾಗದ ವಿಷಯದ ಸಲುವಾಗಿ ತಂಟೆ ತಕರಾರು ಇದ್ದು, ದಿನಾಂಕ **03-05-2022** ರಂದು ಬೆಳಿಗ್ಗೆ **10-30** ಗಂಟೆಗೆ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲೂಕಿನ ಕಾಳಗಿನಕೊಪ್ಪ ಗ್ರಾಮದಲ್ಲಿ ಆರೋಪಿತರಾದ ನೀವೆಲ್ಲರೂ ಸಂಗನಮತರಾಗಿ ಏಕೋದ್ದೇಶ ಹೊಂದಿ ಗೈರ ಕಾಯಿದೇಶೀರ್ ಮಂಡಳಿಯಾಗಿ ಅಕ್ರಮಕೂಟ ರಚಿಸುವ ಮೂಲಕ ಭಾ.ದಂ.ಸಂ.ಕಲಂ.**143** ಸಹವಾಚಕ ಕಲಂ **149** ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಎರಡನೇಯದಾಗಿ, ಆರೋಪಿತರಾದ ನೀವೆಲ್ಲರೂ ಸೇರಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಹಾಗೂ ಸ್ಥಳದಲ್ಲಿ ಏಕೋದ್ದೇಶದಿಂದ ಸಂಗನಮತ ಮಾಡಿಕೊಂಡು, ಪಿರ್ಯಾದಿಯವರೊಂದಿಗೆ ಜಗಳ ತೆಗೆದು ದೊಂಬಿಯನ್ನು ಉಂಟುಮಾಡುವ ಮೂಲಕ ಭಾ.ದಂ.ಸಂ ಕಲಂ 147 ಸಹವಾಚಕ ಕಲಂ 149 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತಿರಿ.

ಮೂರನೇಯದಾಗಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ಪಿರ್ಯಾದಿಯವರ ಮನೆಯ ಅಂಗಳಕ್ಕೆ ಅಕ್ರಮ ಪ್ರವೇಶ ಮಾಡುವ ಮೂಲಕ ಭಾ.ದಂ.ಸಂ.ಕಲಂ.447 ಸಹವಾಚಕ ಕಲಂ 149 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ನಾಲ್ಕನೇಯದಾಗಿ, ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಸ್ವಇಚ್ಛೆಯಿಂದ ಚಾಸಾ 1 ರವರಿಗೆ ಕಾಲಿನಿಂದ ಒದ್ದು, ಕುತ್ತಿಗೆಗೆ ಕೈಯಿಂದ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ 149 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಐದನೇಯದಾಗಿ, ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ನಿಮ್ಮ ಪೈಕಿ 2 ನೇ ಆರೋಪಿಯಾದ ನೀನು ಚಾಸಾ 4 ರವರ ಕೆನ್ನೆಯ ಮೇಲೆ ಹೊಡೆದು, ತಲೆ ಕೂದಲು ಹಿಡಿದು ಜಗ್ಗಾಡಿ ಅವರ ಮಾನಕ್ಕೆ ಕುಂದುಂಟು ಆಗುವ ರೀತಿಯಲ್ಲಿ ವರ್ತಿಸುವ ಮೂಲಕ ನೀವು ಭಾ.ದಂ.ಸಂ.ಕಲಂ.354 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಆರನೇಯದಾಗಿ, ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಚಾಸಾ 1 ರವರನ್ನು ಉದ್ದೇಶಿಸಿ "ಏ ಚಿನಾಲಿ ರಂಡೆ ನಿನ್ನ ತಾಯಿನ ಹಡಾ" ಎಂದು ಅವಾಚ್ಯ ಶಬ್ದಗಳಿಂದ ಬೈದು ಅವರ ಶಾಂತಿಗೆ ಭಂಗ ಉಂಟು ಮಾಡಿ ಅವರನ್ನು ನಿಂದಿಸುವ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ, ಸಂದರ್ಭ ಮತ್ತು ಸ್ಥಳದಲ್ಲಿ ನಿಮ್ಮ ಪೈಕಿ 3, 5 ರಿಂದ 7 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಚಾಸಾ 1 ಮತ್ತು 4 ರವರನ್ನು "ಈ ದಿವಸ ಉಳಿದುಕೊಂಡಿದ್ದೀರಿ ಇನ್ನೊಂದು ಬಾರಿ ಸಿಕ್ಕರೆ ನಿಮಗೆ ಜೀವ ಸಹಿತ ಬಿಡುವುದಿಲ್ಲಾ" ಎಂದು ಜೀವ ಬೇದರಿಕೆ ಹಾಕುವುದರ ಮೂಲಕ ಭಾ.ದಂ.ಸಂ.ಕಲಂ.506 ಸಹ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಆರೋಪಿ ಕ್ರ 1.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ 2.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ 3.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ 4.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ 5.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ 6.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

ಆರೋಪಿ ಕ್ರ 7.

ಪ್ರಶ್ನೆ 1 : ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ : ವಿಚಾರಣೆಯಾಗಬೇಕು.

(ಆರೋಪಿತರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಬೇಕೆಂದು ನಿರ್ದೇಶಿಸುತ್ತೇನೆ .

ಸ್ಥಳ : ಹಳಿಯಾಳ.

ದಿನಾಂಕ : 10-09-2024. ಪ್ರ.ದ.ನ್ಯಾದಂ., ಹಳಿಯಾಳ.